ಅಸಲು ದಾವಾ ನಂ.ಃ 81-2017
ಪಿಡಬ್ಲ್ಯೂಃ 1

ದಿನಾಂಕಃ 03-01-2019
ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ
ವಚನ ಬೋಧಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿಯರ ಪರ ಶ್ರೀ ಸಿ.ಬಿ.ಪಿ. ವಕೀಲರಿಂದಃ

ದಾವೆಯನ್ನು ಬರೆಯಲು ನಾನೇ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಮಾಹಿತಿಯನ್ನು ನೀಡಲು ನಾನು ಒಬ್ಬನೇ ಬಂದಿದ್ದೆ. ಮಾಹಿತಿಯನ್ನು ನೀಡುವಾಗ ನಾನು ಖರೀದಿ ಕಾಗದ ಪತ್ರವನ್ನು ತೆಗೆದುಕೊಂಡು ಬಂದಿದ್ದೆ. ಖರೀದಿ ಕಾಗದವನ್ನು ಬಿಟ್ಟು ಬೇರೆನೂ ಕಾಗದ ಪತ್ರವನ್ನು ತೆಗೆದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಕಾಗದ ಪತ್ರವನ್ನು ಹೊರತು ಪಡಿಸಿ ಬೇರೆನೂ ಕಾಗದ ಪತ್ರ ನಾನು ತೆಗೆದುಕೊಂಡು ಬಂದಿರಲಿಲ್ಲ. ದಾವೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ.

ದಾವಾದ ಆಸ್ತಿಯ ನಂಬರ ನನಗೆ ಹೇಳಲು ಬರುತ್ತದೆ. ದಾವಾದ ಆಸ್ತಿಯ ನಂಃ 60 ಇರುತ್ತದೆ. ದಾವಾದ ಆಸ್ತಿಯ ಆಳತೆ ನನಗೆ ಹೇಳಲು ಬರುವುದಿಲ್ಲ. ದಾವಾದ ಆಸ್ತಿಯ ಪೂರ್ವಕ್ಕೆ ಸರಕಾರಿ ರಸ್ತೆ ಇರುತ್ತದೆ. ದಾವಾದ ಆಸ್ತಿಯ ಪಶ್ಚಿಮಕ್ಕೆ ಶಿವಪ್ಪ ಕನಕಪ್ಪ ಇವರ ಹಿತ್ತಲು ಬರುತ್ತದೆ. ದಾವಾದ ಆಸ್ತಿಯ ಉತ್ತರಕ್ಕೆ ಮಲ್ಲಪ್ಪ ಶೇರೆವಾಟ ಪಡ ಜಾಗಾ ಇರುತ್ತದೆ. ದಾವಾದ ಆಸ್ತಿಯ ದಕ್ಷಿಣಕ್ಕೆ ಹನುಮಂತಪ್ಪ ದ್ಯಾಮಣ್ಣ ಇವರ ಹಿತ್ತಲ ಇರುತ್ತದೆ.

ಪ್ರತಿವಾದಿಯರ ಆಸ್ತಿಯ ನಂಬರ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರ ಆಸ್ತಿಯು ನಮ್ಮ ಆಸ್ತಿಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ಆಸ್ತಿಯು ದಾವಾ ಆಸ್ತಿಯ ಉತ್ತರ ದಿಕ್ಕಿನ ಕಡೆಗೆ ಇರುತ್ತದೆ. ದಾವಾದ ಆಸ್ತಿಯಲ್ಲಿ ಮನೆ ಮತ್ತು ಹಿತ್ತಲ ಜಾಗಾ ಇರುತ್ತದೆ. ದಾವಾದ ಆಸ್ತಿಯಲ್ಲಿ ಇರುವ ಮನೆಯ ಅಳತೆ ಹಾಗೂ ಹಿತ್ತಲ ಜಾಗಾದ ಅಳತೆ ನನಗೆ ಹೇಳಲು ಬರುವುದಿಲ್ಲ. 2ನೇ ವಾದಿ ನನ್ನ ಹೆಂಡತಿಯಾಗಬೇಕು. ದಾವಾದ ಆಸ್ತಿಯು ಮೂಲತಃ ನನ್ನ ಅಣ್ಣನಾದ ಅರ್ಜುನಪ್ಪ ದ್ಯಾಮಣ್ಣ ತಳವಾರ ಇವರದ್ದು ಇತ್ತು. ಬಸವಂತಪ್ಪ ಕನಕಪ್ಪ ಇವರ ಕಡೆಯಿಂದ ನನ್ನ ಅಣ್ಣ ಅರ್ಜುನಪ್ಪ ದ್ಯಾಮಣ್ಣ ತಳವಾರ ಇವರು ಖರೀದಿಗೆ ಹಿಡಿದಿದ್ದರು. ಇವರು ಎಷ್ಟನೇ ಇಸವಿಯಲ್ಲಿ ಖರೀದಿಗೆ ಹಿಡಿದಿದ್ದರು ಎಂದು ನನಗೆ ಗೊತ್ತಿರುವು ದಿಲ್ಲ. ಅಸ್ತಿಯನ್ನು ನನ್ನ ಅಣ್ಣನು ಖರೀದಿ ಹಿಡಿದಿರುತ್ತಾನೆ ಎಂದು ತೋರಿಸಲು ಖರೀದಿ ಕಾಗದ ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ನನ್ನ ಅಣ್ಣನು 10 ರಿಂದ 12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ನನ್ನ ಅಣ್ಣನು ಮೃತಪಟ್ಟ ನಂತರ ಆತನ ಆಸ್ತಿಯು ನನಗೆ ಬಂದಿರುತ್ತದೆ. ನನ್ನ ಅಣ್ಣನು ಹಿಸ್ಸೆ ಮುಖಾಂತರ ನನಗೆ ಕೊಟ್ಟಿರುತ್ತಾನೆ. ನನ್ನ ಅಣ್ಣನು ಹಿಸ್ಸೆ ಮುಖಾಂತರ ದಾವಾದ ಅಸ್ತಿಲಯನ್ನು ನನಗೇ ಕೊಟ್ಟಿರುತ್ತಾನೆ ಎಂದು ತೋರಿಸಲು ಕಾಗದ ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನು ಕನ್ನಡ ಶಾಲೆಯ ಶಿಕ್ಷಕ ಇದ್ದನು ಎಂದರೆ ಸರಿ. ನನ್ನ ಅಣ್ಣನು ಹಾನಗಲ್ ತಾಲೂಕಿನ ಮಾರನಬೀಡ ಶಾಲೆಯಲ್ಲಿ ಶಿಕ್ಷಕನಾಗಿದ್ದನು. ನನ್ನ ಅಣ್ಣನು ಮಾರನಬೀಡ ಗ್ರಾಮದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ಸರಿ. ನನ್ನ ಅಣ್ಣನು ಮಾರನಬೀಡ ಗ್ರಾಮದಲ್ಲಿ ಮದುವೆ ಆಗಿದ್ದನು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಣ್ಣನು ಆತನ ಮದುವೆ ಆಗಿತ್ತು ಎಂದು ನನಗೆ ಹೇಳಿದ್ದನು ಆ ಕಾರಣ ನಾನು ಆಗಿದೆ ಎಂದು ಹೇಳುತ್ತಿದ್ದೇನು. ನನ್ನ ಅಣ್ಣನ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನ

ಹೆಂಡತಿಯು ದಾವಾದ ಆಸ್ತಿಗೆ ಸರಳ ವಾರಸುದಾರಳು ಇರುತ್ತಾಳೆ ಎಂದರೆ ಸಾಕ್ಷಿಯು ನನ್ನ ಅಣ್ಣನ ಹೆಂಡತಿಯು ಜೀವಂತ ಇರುವುದಿಲ್ಲ. ಅವಳು ಮೃತಪಟ್ಟಿರುತ್ತಾಳೆ. ನನ್ನ ಅಣ್ಣ ಹಾಗೂ ಆತನ ಹೆಂಡತಿಯು ಮೃತ ಪಟ್ಟಿರುವ ಬಗ್ಗೆ ಮರಣ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವಾದ ಅಸ್ತಿಯ ಮೇಲೆ ನನಗಾಗಲಿ ಅಥವಾ 2ನೇ ವಾದಿಗೆ ಆಗಲಿ ಮಾಲಕಿ ಹಾಗೂ ವಾರಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾದ ಅಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ನಾವು ವಹಿವಾಟ ಇರದೇ ಕಾರಣ ಕಬ್ಜೆ ಇರುವುದಿಲ್ಲ ಎಂದರೆ ಸರಿಯಲ್ಲ.

ಪಂಚಾಯತಿಯವರು ಬಸವ ವಸತಿ ಯೋಜನೆ ಅಡಿಯಲ್ಲಿ 2ನೇ ವಾದಿಯ ಹೆಸರಿನಲ್ಲಿ ಮನೆಯನ್ನು ಮಂಜೂರು ಮಾಡಿರುತ್ತಾರೆ. ಮನೆಯನ್ನು ಮಂಜೂರು ಮಾಡಿದ ಆಸ್ತಿಯ ಉತಾರವನ್ನು ಹಾಜರು ಪಡಿಸಿರುತ್ತೇನೆ. ಸದರಿ ಉತಾರದ ನಂಃ 60 ಇರುತ್ತದೆ. ಆಸ್ತಿ ನಂಃ 60 ರಲ್ಲಿ ಪಾಲು ವಿಭಾಗ ಆಗಿರುತ್ತದೆ. ಪಾಲು ವಿಭಾಗ ಆದ ಬಗ್ಗೆ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ದಾವಾದ ಆಸ್ತಿಯಲ್ಲಿ 1 ಭಾಗವನ್ನು 2ನೇ ವಾದಿಗೆ ಬಿಟ್ಟು ಕೊಟ್ಟಿರುತ್ತೇನೆ. ದಾವಾದ ಅಸ್ತಿಯಲ್ಲಿ ಭಾಗ ಆದ ಬಗ್ಗೆ ಆಸ್ತಿ ನಂಬರ ಇರುವುದಿಲ್ಲ. ಗ್ರಾಮ ಪಂಚಾಯತಿವರು ಮನೆಯನ್ನು ಕಟ್ಟಲು ಪರವಾನಿಗೆ ನೀಡಿದ ಕಾರಣ ಮನೆಯನ್ನು ಕಟ್ಟಿರುತ್ತೇವೆ. ಪಂಚಾಯತಿಗೆ ಕೊಟ್ಟಂತಹ ಅರ್ಜಿಯನ್ನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ನಾನು ಅರ್ಜಿಯನ್ನು ಪಂಚಾಯತಿಯಲ್ಲಿ ಕೊಟ್ಟ ನಂತರ ಠರಾವು ಮಾಡಿರುತ್ತಾರೆ. ಕಳೆದ 1 ವರ್ಷಗಳ ಹಿಂದೆ ನಾನು ಅರ್ಜಿಯನ್ನು ಪಂಚಾಯತಿಗೆ ಕೊಟ್ಟಿದ್ದೆ. ಯಾವ ದಿನಾಂಕ, ತಿಂಗಳು ಎಂದು ಠರಾವು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮನೆಯನ್ನು ಕಟ್ಟಲು ಪರವಾನಿಗೆಯನ್ನು ನೀಡಿದ್ದನ್ನು ಈದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪರವಾನಿಗೆಯಲ್ಲಿ ಯಾವ ಯಾವ ಷರತ್ತುಗಳನ್ನು ಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ಕ್ಷೇತ್ರದಲ್ಲಿ

ಮನೆಯನ್ನು ಮಂಜೂರು ಮಾಡಬೇಕು ಎಂದು ಪರವಾನಿಗೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಯಾವ ಚಕಬಂದಿಯಲ್ಲಿ ಮನೆಯನ್ನು ನಿರ್ಮಾಣ ಮಾಡಬೇಕು ಎಂದು ನನಗೆ ಚಕಬಂದಿ ಹೇಳಲು ಬರುವುದಿಲ್ಲ. ದಾವಾದ ಆಸ್ತಿಯು ನನಗೆ ಹಾಗೂ 2ನೇ ವಾದಿಗೆ ಸಂಬಂಧಪಡದೇ ಇದ್ದರು ಕೂಡಾ ನಾನು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಖೊಟ್ಟಿ ದಾಖಲೆಗಳ ಮೇಲಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.